
## ಚಿತ್ತ ಕೆತ್ತಿದ ಚಿತ್ರ

ಮುಗ್ಧತೆಯಾಗಿ, ಮುಗ್ಧತೆಯೇ ಪರಿಪಕ್ವ ವ್ಯಕ್ತಿತ್ವಕ್ಕೆ ಮುನ್ನುಡಿಯಾಗಿ ರೂಪುಗೊಳ್ಳುವ ಪ್ರಕ್ರಿಯೆಯೊಂದು ಕಾದಂಬರಿಯಲ್ಲಿ ಚಾಲ್ತಿಗೆ ಬಂದಂತೆ ತೋರುತ್ತದೆ. ಆದ್ದರಿಂದಲೇ ಕಾದಂಬರಿಯ ಆರಂಭದಲ್ಲಿ ತನ್ನ ಮಾವನ ಮನೆಯೇ ಹೆಚ್ಚು ಆಪ್ತವಾಗಿದ್ದ ಕಿಟ್ಟಿಗೆ ಕಾದಂಬರಿಯ ಕೊನೆಯಲ್ಲಿ ಅತ್ತೆ ಇಲ್ಲದ ಪ್ರೀತಿ, ಕರುಣೆಗೆ ಬೆಲೆ ಇಲ್ಲದ ಈ ಊರನ್ನು, ಮಾವನ ಮನೆಯನ್ನು ಒಮ್ಮೆ ತ್ಯಜಿಸಿ ತನ್ನ ಅವ್ವ, ಅಜ್ಜಿ, ಸುಶಿಯ ಬಳಿ ಹೋದರೆ ಸಾಕು ಎಂಬ ಪರಿಸ್ಥಿತಿಯನ್ನು ಎರಡು ಹಳ್ಳಿಗಳ ನಡುವಿನ ವೈಷಮ್ಯ, ಹಿಂಸೆ, ಕ್ರೌರ್ಯ, ರಕ್ತಪಾತಗಳು ನಿರ್ಮಾಣ ಮಾಡಿಬಿಡುತ್ತವೆ.

ಆದರೆ, ಇಡೀ ಕಾದಂಬರಿಯಲ್ಲಿ ಪುರುಷ ಜಗತ್ತಿನ ಸಂಘರ್ಷಕ್ಕೆ ಬಲಿಯಾಗುವ ಅತ್ತೆ ಕಮಲಿಯ ದಾರುಣ ಸಾವು, ನಾಗಿಯ ಅಜ್ಜಿಯ ಆರೈಕೆ ಇಲ್ಲದೆ ದೇಹದಲ್ಲಾದ ಹುಣ್ಣಿನಿಂದ ಉಲ್ಬಣಿಸಿದ ಕೀವು-ರಕ್ತ ವ್ಯಾಪಿಸಿ ಉಂಟಾದ ಮರಣ, ಗೆಳೆಯ ಅನಂತುವಿನ ತಾಯಿ ಸಾವಿತ್ರಮ್ಮ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡದ್ದು, ಮೊಣ್ಣ ನಾಯಿಯನ್ನು ಕಿರುಬ ಹೊತ್ತುಕೊಂಡು ಹೋಗಿ ತಿಂದುಹಾಕಿದ್ದು, ಗೌರಿ ಹಸುವಿಗೆ ಸಿಡಿಮದ್ದು ಹಾಕಿ ಬಾಯಿಯಿಂದ ರಕ್ತ ಸೋರಿ ಹುಲ್ಲು ತಿನ್ನಲಾಗದೆ, ನೀರು ಇಳಿಸಲಾಗದೆ ಸಾವನ್ನಪ್ಪಿದ್ದು, ಶಿವಗಂಗನ ಸೇಡಿನ ಬೆಂಕಿಗೆ ಬಲಿಯಾದ ಮಾವ ಚಂದ್ರೇಗೌಡರ ರಾಗಿಯ ಹೊಲ, ಹಟ್ಟಿಯ ಆಳು ಹನುಮಂತುವಿನ ಜೊತೆಯಲ್ಲಿ ನಾಗಿಯ ಚಿಕ್ಕಮ್ಮ ಕಲ್ಯಾಣಿ ಓಡಿ ಹೋಗಿದ್ದು, ಸಾವಿತ್ರಮ್ಮನ ಹೆಣ ರಾತ್ರೋರಾತ್ರಿ ಸುಟ್ಟ ಕಾರಣ ಮಾವ ಚಂದ್ರೇಗೌಡನನ್ನು ಪೋಲಿಸರು ವಶಕ್ಕೆ ಪಡೆದು ನಾಟಕ ನಿಂತು ಹೋದದ್ದು ಈ ಎಲ್ಲಾ ಘಟನೆಗಳು ಕಿಟ್ಟಿಯ ಸತ್ ಪೂರ್ಣ ಭಾವಲೋಕವನ್ನು ಕಲಕದೆ ಬಿಡುವುದಿಲ್ಲ.



ಸಹಜ-ಅಸಹಜ, ನೈತಿಕ-ಅನೈತಿಕ, ಹೇಳಬೇಕಾದ-ಹೇಳಬಾರದ ಎಲ್ಲಾ ಆಯಾಮಗಳನ್ನು ಪರಿಶೀಲಿಸುವ ಮುಕ್ತ ಸ್ವಾತಂತ್ರ್ಯವೊಂದು ಕಾದಂಬರಿಕಾರರಿಗೆ ಕಿಟ್ಟಿ ಸಣ್ಣ ಹುಡುಗನಾಗಿರುವ ಕಾರಣದಿಂದಲೇ ಪ್ರಾಪ್ತವಾಗಿದೆ. ವಸ್ತು ಸ್ಥಿತಿಯನ್ನು ನಿರೂಪಿಸುವುದರ ಹೊರತು ಯಾವುದೇ ಬಗೆಯ ಸೈದ್ಧಾಂತಿಕ ಸಂಘರ್ಷಕ್ಕೂ, ಸಾಹಿತ್ಯ ವಿಮರ್ಶೆ ಎತ್ತಬಹುದಾದ ಪ್ರಶ್ನೆಗಳಿಗೂ ಉತ್ತರಿಸುವ ಜರೂರನ್ನು ಕೃಷ್ಣ ಅವರ ನಿರೂಪಣೆ ಮುಂದು ಮಾಡಲಿಲ್ಲ. ಮುಗ್ಧತೆ ಮತ್ತು ನೈತಿಕತೆಯನ್ನು ಸದಾ ಶ್ರೀಕೃಷ್ಣ ಅವರು ಕಥನವಾಗಿಸುವ ಮಾದರಿ ಇದು. ದಟ್ಟ ಜೀವನಾನುಭವವನ್ನು ಯಾವುದೇ ಮುಚ್ಚುಮರೆ ಇಲ್ಲದೆ ಓದುಗನಿಗೆ ದಾಟಿಸುವ ಕ್ರಮವೊಂದರ ಸೃಷ್ಟಿಶೀಲ ಪ್ರಕ್ರಿಯೆಯನ್ನು ಆಲನಹಳ್ಳಿ ಅವರ ಎಲ್ಲಾ ಬರಹಗಳಲ್ಲಿ ಕಾಣಲು ಸಾಧ್ಯ.

ಮನುಷ್ಯ ಎಷ್ಟೇ ನಾಗರಿಕನಾಗಿದ್ದರೂ ಸಹ ಕಾಡಿನೊಳಗಣ ಅನಾಗರಿಕತೆ ನಾಡಿನೊಳಗಿದ್ದರೂ ಸಹ ಮರೆಯಾಗದೆ ಆ ಕ್ರೌರ್ಯ ಹಾಗೇ ಉಳಿದು ಬಿಟ್ಟಿದೆ ಎಂಬುದನ್ನು 'ಕಾಡು' ಕಾದಂಬರಿ ನೇರವಾಗಿ ಹೇಳದೇ ಹೇಳಿದಂತೆ ತೋರುತ್ತದೆ. ಕಾಡು ಕಾದಂಬರಿಯ ಕಿಟ್ಟಿಯ ಪಾತ್ರವನ್ನು ಶ್ರೀಕೃಷ್ಣ ಆಲನಹಳ್ಳಿಯವರು ತಮ್ಮ ಕೊನೆಯ ಸಂಕಲನವಾದ 'ಗೋಡೆ'ಯಲ್ಲಿ ಬರುವ ನಾಯಕ ಕಿಟ್ಟಿಯಾಗಿಯೇ ಮುಂದುವರೆಸಿದ್ದಾರೆ. ಇದರಲ್ಲಿ ಕಿಟ್ಟಿಯ ಭಾವಲೋಕ ಸ್ವಲ್ಪಮಟ್ಟಿಗೆ ವಿಸ್ತಾರಗೊಳ್ಳುತ್ತದೆ.

ಒಟ್ಟಿನಲ್ಲಿ ಮನುಷ್ಯ ಕ್ರೌರ್ಯಕ್ಕೆ ಮುಗ್ಧ ಬಾಲಕನ ಬಾಲ್ಯಕಾಲ ಬಲಿಯಾಗುವ ವಿವಿಧ ಹಂತಗಳನ್ನು ಈ ಕಾದಂಬರಿ ಕಟ್ಟಿಕೊಟ್ಟಿದೆ. ಮತ್ತೆ ಮತ್ತೆ ಚುಚ್ಚುವ ನೋವು, ಸಾವು, ಕ್ರೌರ್ಯ, ಹಿಂಸೆ, ರಕ್ತಪಾತ, ಹತಾಶೆ ಇವುಗಳಿಂದ ತನ್ನ ಬಾಲ್ಯಕಾಲದ ನವಿರನ್ನು ಜತನದಿಂದ ಕಾಪಾಡಲು ಕಿಟ್ಟಿ ಪಲಾಯನಗೊಳ್ಳಲು ಮುಂದಾಗುತ್ತಾನೆ.

ಕೊನೆಯದಾಗಿ ಕನ್ನಡ ಸಾಹಿತ್ಯ ವಿಮರ್ಶೆಯು ಆಲನಹಳ್ಳಿಯವರ ಕಾದಂಬರಿಯೊಳಗಿನ ಸ್ತ್ರೀ ಪಾತ್ರದ ಆಳವನ್ನು ಶೋಧಿಸುವ ಪ್ರಯತ್ನ ಮಾಡಿಲ್ಲ ಎಂದೆನ್ನಿಸುತ್ತದೆ. ಆಲನಹಳ್ಳಿ ಅವರ ಕಾದಂಬರಿಯ ಸ್ತ್ರೀ ಪಾತ್ರಗಳ ಮರುಓದು ಮತ್ತು ಮರುಶೋಧದ ಅಗತ್ಯ ಖಂಡಿತವಾಗಿಯೂ ಇದೆ ಎಂಬ ಭಾವದೊಂದಿಗೆ ನನಗೆ ಕಿಟ್ಟಿ ಆಗಾಗ ನೆನಪಾಗುತ್ತಾನೆ.

●